(ಇಂದು ದಿನಾಂಕಃ 03-08-2023 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಿ ಮುಖ್ಯ ವಿಚಾರಣೆಗೆ ಒಳಪಡಿಸಲಾಯಿತು ಬೋಧಿಸಲಾಯಿತು.)

**ಪಾಟೀ ಸವಾಲುಃ ವಾದಿ ಪರಃ ಶ್ರೀ ಎ.ಡಿ.ಸಿ. ವಕೀಲರಿಂದಃ**

ಪ್ರತಿವಾದಿ ಸೌದಿಯಲ್ಲಿ ಇರುತ್ತಾರೆ. ನನಗೆ ಈ ಕೇಸಿನಲ್ಲಿ ಸಾಕ್ಷಿ ಹೇಳಲು ಅಬ್ದುಲ್ ರಜಾಕ್ ಅಹಮ್ಮದ್ ಮೊಮಿನ್ ಹೇಳಿದ್ದರು. ಅವರು ನನಗೆ ದಸ್ತಾವೇಜಿಗೆ ಸಬ್ ರಜಿಸ್ಟ್ರಾರ್ ಕಚೇರಿಯಲ್ಲಿ ಸಹಿ ಹಾಕಲು ಹೇಳಿದ್ದರು. ಸದರಿ ದಸ್ತಾವೇಜನ್ನು ಎಲ್ಲಿ, ಯಾರು ಟೈಪ್ ಮಾಡಿ ತಂದಿದ್ದರು ಎಂದು ನನಗೆ ಗೊತ್ತಿಲ್ಲ. ಸದರಿ ದಸ್ತಾವೇಜು ಇಂಗ್ಲೀಷ್‌ನಲ್ಲಿ ಬರೆದಿತ್ತು. ನಾನು ಮಧ್ಯಾಹ್ನ 3.00 ಗಂಟೆಗೆ ಸಬ್ ರಜಿಸ್ಟ್ರಾರ್ ಕಚೇರಿಗೆ ಹೋಗಿದ್ದೆ. ಅಬುಬಕ್ಕರ ಸಯ್ಯುದ ಪುಲುಸುಂಬಿ, ಖಾಜಿ ವಕೀಲರು, ಅವರ ಹೆಂಡತಿ ಮತ್ತು ನಾನು ಸಬ್ ರಜಿಸ್ಟ್ರಾರ್ ಕಚೇರಿಯಲ್ಲಿ ಇದ್ದೆವು. ಖಾಜಿ ವಕೀಲರ ಹೆಂಡತಿಯವರೂ ಸಹ ದಸ್ತಾವೇಜಿಗೆ ಸಹಿ ಹಾಕಿದ್ದರು. ಮರಿಯಾಂಬಿ ಸಬ್ ರಜಿಸ್ಟ್ರಾರ್ ಕಚೇರಿಗೆ ಬಂದಿದ್ದರು. ಸದರಿ ಆಸ್ತಿ ನನಗೆ ಸೇರಿದ್ದು ನಿಮಗೆ ಕೊಡುತ್ತೇನೆ ಎಂದು ಹೇಳಿ ದಾಖಲೆ ತಯಾರಿಸಿದ್ದರು. ಅದು ಯಾವ ರೀತಿಯ ದಸ್ತಾವೇಜು ಎಂದು ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ ಬರೆದಿರುವುದಿಲ್ಲ. ಅಬುಬಕ್ಕರ ಸಯ್ಯುದ ಈ ಕೇಸಿನಲ್ಲಿ ಏನು ಸಾಕ್ಷಿ ಹೇಳಿದ್ದಾರೆ ಎಂದು ನನಗೆ ಗೊತ್ತಿಲ್ಲ. ಅದೇ ರೀತಿ ಖಾಜಿ ವಕೀಲರು ಸದರಿ ದಸ್ತಾವೇಜಿನ ಬಗ್ಗೆ ಏನು ಸಾಕ್ಷಿ ಕೊಟ್ಟಿದ್ದಾರೆ ಎಂದು ನನಗೆ ಗೊತ್ತಿಲ್ಲ. ಅಬುಬಕ್ಕರ ಸಯ್ಯುದ ನನ್ನ ಬಳಿ ದಸ್ತಾವೇಜಿನ ಬಗ್ಗೆ ಏನೂ ಹೇಳಿರುವುದಿಲ್ಲ. ದಸ್ತಾವೇಜು ತಯಾರಿಸುವಾಗ ನಾನು ಇರಲಿಲ್ಲ. ಅದು ತಯಾರಾದ ನಂತರ ಸಹಿ ಮಾಡಲು ನನಗೆ ಕರೆದಿದ್ದರು. ದಸ್ತಾವೇಜಿಗೆ ಸುಮಾರು ರೂ. 1,35,000/- ಸ್ಟಾಂಪ್ ಹಣ ಕಟ್ಟಿರುತ್ತಾರೆ. ಆ ಹಣವನ್ನು ನನ್ನ ಸಮಕ್ಷಮ ಕಟ್ಟಿರುತ್ತಾರೆ. ಆ ಹಣವನ್ನು ಸ್ಟಾಂಪ್ ಡ್ಯೂಟಿ ಎಂದು ಕಟ್ಟಿರುತ್ತಾರೆ. ಅಬ್ದುಲ್ ರಜಾಕ್ ಅಹಮ್ಮದ್ ಮೊಮಿನ್ ಇವರಿಗೆ ಕಾರವಾರ ಕೋಡಿಭಾಗ ರಿಕ್ಷಾ ನಿಲ್ದಾಣದ ಸಮೀಪ ಅಂಗಡಿ ಇದೆ. ಸದರಿ ಅಂಗಡಿ ಅಬ್ದುಲ್ ರಜಾಕ್ ಮತ್ತು

ಅಹಮ್ಮದ್ ಮೊಮಿನ್ ಇವರ ಜಂಟಿ ಹೆಸರಿನಲ್ಲಿ ಇದೆ ಎಂದರೆ ಸರಿ. ಅಹಮ್ಮದ್ ಮೊಮಿನ್‌ರವರ ಅಂಗಡಿಯನ್ನು ನಾನು ಕಬಜಾ ಮಾಡಿ ಅಲ್ಲಿ ಕುಳಿತುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಅದನ್ನು ಅವರೇ ಕೊಟ್ಟಿದ್ದರು ಎನ್ನುವರು. ಅಹಮ್ಮದ್ ಮೊಮಿನ್ ಇವರಿಗೆ ಸದರಿ ಅಂಗಡಿಯನ್ನು ನನಗೆ ಬರೆದುಕೊಡಲು ಯಾವುದೇ ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ವಾದಿ ಮತ್ತು ನನ್ನ ಮಧ್ಯೆ ಒಂದು ದಾವೆ ಇದ್ದು ಅದು ವಿಚಾರಣೆಯಲ್ಲಿ ಬಾಕಿ ಇದೆ ಎಂದರೆ ಸರಿ. ನನ್ನ ವಿರುದ್ಧ ವಾದಿ ದಾವೆ ಹೂಡಿದ್ದರಿಂದ ನಾನು ಈ ದಾವೆಯಲ್ಲಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ದಸ್ತಾವೇಜು ನನಗೆ ದಾನಪತ್ರ ಎಂದು ಹೇಳಿದ್ದರು. ನನಗೆ ದಸ್ತಾವೇಜಿನ ಬಗ್ಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ – ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಕಾರವಾರ